A.—**The Hon'ble Sri T. MARIAPPA** (Home Minister).—

(*a*) (1) Yes, for Rs. 1,56,000.

(2) No.

(3) If the project is feasible and the estimate is sanctioned.

(*b*) It is possible to divert 120 units of water to the Alanahalli tank valley. By this water supply could be given to a few tanks situated at the upper reaches of the Valley.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ಫೀಡರ್ ಛಾನಲ್ ವಿಷಯ ಯಾವ ಸ್ಟೇಜಿನಲ್ಲಿದೆ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಎಸ್ಟಿಮೇಟ್ ತಯಾರಾಗಿದೆ. ಈಗ ಅದನ್ನು scrutinize ಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆಲನಹಳ್ಳಿ ಕೆರೆಯ Valley ಗೆ ಹೀಗೆ ನೀರೊದಗಿಸುವುದರಿಂದ ಅದರ Series ನಲ್ಲಿರುವ ಎಷ್ಟು ಎಕರೆ ಜಮೀನುಗಳಿಗೆ ನೀರಿನ ಭರವಸೆ ಬರುತ್ತದೆ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 120 ಯೂನಿಟ್ಟುಗಳು ಇದರಿಂದ ಬರಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅದನ್ನು ಇಲ್ಲೇ ಹೇಳಿದ್ದೀರಿ. ನಾನು ಕೇಳುವುದು ಈ ಆಲನಹಳ್ಳಿ ಕೆರೆ Series ಗೆ ಹೀಗೆ 120 ಯೂನಿಟ್ಟುಗಳನ್ನು ಸರಬರಾಯಿ ಮಾಡುವುದರಿಂದ ಆ Series ನಲ್ಲಿರುವ ನಾನಾ ಕೆರೆಗಳಲ್ಲಿ ಎಷ್ಟು ಅಚ್ಚುಕಟ್ಟಿಗೆ ಉತ್ತಮವಾಗುತ್ತದೆಂದು ಅಂದಾಜುಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 120 ಯೂನಿಟ್ಟುಗಳಿಂದ ಸುಮಾರು ಎಷ್ಟು ಎಕರೆಗಳಿಗೆ ನೀರಿನ ಭರವಸೆ ಕೊಡುವುದಕ್ಕೆ ಸಾಧ್ಯವೋ ಅಷ್ಟಕ್ಕೂ ಕೊಡಬಹುದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ Series ನಲ್ಲಿ ಅನೇಕ ಕೆರೆಗಳ ಕೆಳಗೆ 750 ಎಕರೆಗಳಿಂದ 1,000 ಎಕರೆಗಳವರೆಗೂ ಅಚ್ಚುಕಟ್ಟಿದೆ. ಅವೆಲ್ಲಕ್ಕೂ ಇದರಿಂದ ನೀರಿನ ಭರವಸೆ ದೊರೆಯುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 120 ಯೂನಿಟ್ ನೀರಿನಿಂದ ಎಷ್ಟರಮಟ್ಟಿಗೆ ಭರವಸೆ ಕೊಡಲು ಸಾಧ್ಯವೋ ಅಷ್ಟರಮಟ್ಟಿಗೂ ಭರವಸೆ ಕೊಡುತ್ತೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅನೇಕ ವರ್ಷಗಳಿಂದ ಈ ಕೆರೆಗಳ ಕೆಳಗೆ ಫಸಲು ಸಮರ್ಪಕವಾಗಿ ಆಗುತ್ತಿಲ್ಲವೆಂದೂ, ನೀರಿನ ಭರವಸೆಯಿಲ್ಲದೆ ಸರಿಯಾಗಿ ಹೈರಾಣುಮಾಡುವುದಕ್ಕಾಗುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆದ್ದರಿಂದ ಈ ಅಂದಾಜನ್ನು ಅಡಮ್ಟು ಜಾಗ್ರತೆ ಮಂಜೂರುಮಾಡಬೇಕೆಂಬುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಪರ್ಯಾಲೋಚನೆಮಾಡಬೇಕೆಂದೇ ಇದ್ದೇವೆ. ಇದರ ಬಗ್ಗೆ ಚೀಫ್ ಇಂಜಿನಿಯರ್ ಆಫೀಸರು ಫಿಪರೀತ ದುಬಾರಿ ಖರ್ಚಾಗುತ್ತದೆಂದು ಹೇಳಿದ್ದಾರೆ. ಸುಮಾರು 1,56,000 ರೂಪಾಯಿಗಳಷ್ಟು ಹೆಚ್ಚಿಗೆ ಹಣ ಬೇಕಾಗುತ್ತದೆಂದು ಹೇಳಿದರು. ಆದರೂ ಇದನ್ನು ಪುನಃ ಪರಿಶೀಲನೆಮಾಡಿ ಇನ್ನೂ ಕಡಿಮೆ ಖರ್ಚಿನಲ್ಲಿ ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ಪ್ರಾಜೆಕ್ಟಿನಿಂದ ಉಪಯೋಗ ಹೊಂದಿ ನೀರಿನ ಭರವಸೆ ಹೊಂದುವ ಎಕರೆಯ ವಿಸ್ತೀರ್ಣವನ್ನು ಗಮನದಲ್ಲಿಟ್ಟುಕೊಂಡರೆ ಇದಕ್ಕೆ ಖರ್ಚಾಗುವ ಒಂದು ಲಕ್ಷ 56 ಸಾವಿರ ರೂಪಾಯಿಗಳೂ ಕಡಿಮೆಯೆಂದು ಹೇಳುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಅಚ್ಚುಕಟ್ಟಿನ ಎಲ್ಲಾ ಪ್ರದೇಶವನ್ನೂ ಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮೂರು ಕಾಸೂ ಖರ್ಚಿಲ್ಲದೆ ಎಷ್ಟು ಪ್ರದೇಶದಲ್ಲಿ ಬೆಳೆಯಾಗುತ್ತಿತ್ತೋ ಅದನ್ನು ಬಿಟ್ಟು ಬಾಕಿ ಪ್ರದೇಶಕ್ಕೆ ಮಾತ್ರ ಈ ಹೆಚ್ಚಿನ ಖರ್ಚು ಬಿದ್ದಿದೆಯೆಂದು ಭಾವಿಸಬೇಕು. ಆದ್ದರಿಂದ ಈ ಹೆಚ್ಚಿನ ಖರ್ಚಿನಿಂದ ಎಷ್ಟು ಹೆಚ್ಚಿಗೆ ಜಮೀನು ಸಾಗುವಳಿಗೆ ಬರುತ್ತದೆಂಬುದನ್ನು ನೋಡಬೇಕು. ಇದನ್ನೊಂದು ಫೀಡರ್ ಛಾನಲ್ ಎಂದು ತೆಗೆದುಕೊಂಡರೆ, ಇಂಡಿಯಾ ಸರ್ಕಾರದವರು ಅದಕ್ಕೆ ಹಣ ಕೊಡಲು ಎಷ್ಟು ಏಕರೇಜ್ ಹೆಚ್ಚಿಗೆ ಸಾಗುವಳಿಯಾಗುತ್ತದೆಂಬುದನ್ನು ತಿಳಿಸಬೇಕೆಂದು ಅವರು ಒತ್ತಾಯಮಾಡುತ್ತಾರೆ. ಆ ದೃಷ್ಟಿಯಿಂದ ಈ ಪ್ರಾಜೆಕ್ಟನ್ನು ಪುನಃ ಪರೀಕ್ಷೆಮಾಡಿ ನೋಡಬೇಕೆಂದು ಹೇಳಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಫೀಡರ್ ಛಾನಲ್‌ನ ಖರ್ಚಿನ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ.....

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೇ ಅದನ್ನು ಪುನರ್‌ಪರಿಶೀಲನೆ ಮಾಡುತ್ತಿದ್ದೇವೆ. ಅಲ್ಲೊಂದು ಕಡೆ deep cutting ಬರುತ್ತದೆ. ಪುನಃ ಪರಿಶೀಲನೆ ಮಾಡಿ ಎಷ್ಟರಮಟ್ಟಿಗೆ ಖರ್ಚು ಕಡಿಮೆಮಾಡಬಹುದೆಂದು ನೋಡುತ್ತೇವೆ

ಅಧ್ಯಕ್ಷರು.—165ನೆಯ ಪ್ರಶ್ನೆ. ಈ ಪ್ರಶ್ನೆಯನ್ನು ಕಳುಹಿಸಿದ ಮಾನ್ಯ ಸದಸ್ಯರು ಬಂದಿಲ್ಲ. ಶ್ರೀ ಹುಚ್ಚೇಗೌಡರು ಆ ಪ್ರಶ್ನೆಯನ್ನು ಹಾಕಬಹುದೆಂದು ಹೇಳಿ ಬರೆದುಕಳುಹಿಸಿದ್ದಾರೆ. ಅದರಂತೆ ಈಗ ಮಾನ್ಯ ಹುಚ್ಚೇಗೌಡರು ಉಪಪ್ರಶ್ನೆ ಹಾಕಬಹುದು.

Desilting of Tanks.

Q.—165. **Sri B. HUTCHE GOWDA** (Tumkur District—General) [on behalf of **Mushir-ul-Mulk J. MOHAMED IMAM** (Tumkur *cum* Chitaldrug—Muslim).]—

Will the Government be pleased to state :—

(*a*) the number and the names of the tanks that were desilted with the help of bulldozers, taxi-excavators and other mechanical means;

(*b*) the cost of desilting each tank?

A.—**The Hon'ble Sri T. MARIAPPA** (Home Minister).—

(*a*) Six tanks were desilted, all in Bangalore Taluk, as detailed below :—

	Names		*Cost of desilting*
			Rs.
1.	Chokkasandra tank	...	30,200
2.	Singasandra tank	...	5,840
3.	Gangasetty tank	...	5,621
4.	Basavanapura tank	...	4,365
5.	Venkappaiyanakere	...	8,257
6.	Lalbagh tank	...	4,852

(*b*) The cost of desilting is noted against each tank at (*a*).

ಶ್ರೀ ಬಿ. ಹುಚ್ಚೇಗೌಡರು.—ಈ ಕೆರೆಗಳ ಆಚ್ಚುಕಟ್ಟು ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಎಷ್ಟು ಆಚ್ಚುಕಟ್ಟಿತ್ತೋ ಅಷ್ಟೇ ಆಚ್ಚುಕಟ್ಟು. ಅಲ್ಲಿಗೆ ಬರುವ ನೀರನ್ನು ಅಲ್ಲೇ store ಮಾಡಬೇಕೆಂದು ಇದನ್ನು ಮಾಡುತ್ತಿದ್ದೇವೆ. ಅಷ್ಟೇ ಆಚ್ಚುಕಟ್ಟಿನ ಅಂಕೆ ಅಂಶಗಳು ಇಲ್ಲಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಈಗ ನೀವು ಮಾಡುವ ಖರ್ಚು ಒಂದು ಎಕರೆಗೆ ಎಷ್ಟು ಬೀಳುತ್ತೆಂದು ಲೆಕ್ಕಹಾಕಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಘನ ಗಜ ಮಣ್ಣು ತೆಗೆಸಲು 7 ಆಣೆಯವರೆಗೂ ಆಗುತ್ತದೆಂದು ಹೇಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಈಗ ತಾವು ಹಣ ಖರ್ಚು ಮಾಡಿರುವುದರ ಪ್ರಕಾರ ಒಂದು ಎಕರೆಗೆ ಅಂದಾಜಾದಲ್ಲಿ ಎಷ್ಟು ಬೀಳಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ಅಂದಾಜಾದಲ್ಲಿ ನುಮಾರು 700-800 ರೂಪಾಯಿಗಳವರೆಗೂ ಬೀಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಈಗಿರುವ ಆಚ್ಚುಕಟ್ಟಿಗೆ ನೀರನ್ನು ಒದಗಿಸುವುದಕ್ಕೆ ಎಕರೆಗೆ 700 ರೂಪಾಯಿಗಳಷ್ಟಾಗುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಚೊಕ್ಕಸಂದ್ರದ ಕೆರೆ ನೀವು ನೋಡಿದ್ದರೆ ಗೊತ್ತಾಗುತ್ತಿತ್ತು. ಅಲ್ಲಿನ ನೀರು ಒಂದಡಿ ಇಳಿದಿತ್ತು. 8 ಅಡಿಗಳಷ್ಟು ಹೂಳು ತಂಬಿತ್ತು. ಇದನ್ನೆಲ್ಲಾ ತೆಗೆದು ಪೊದಲಿನ ಆಳಕ್ಕೆ ತರುವುದಕ್ಕೆ ಇಷ್ಟು ಖರ್ಚಾದ್ದು ಹೆಚ್ಚೆಲ್ಲ. ಅಲ್ಲದೆ ಇದೊಂದು ಪ್ರಮುಖತಃ ಪ್ರಾಯೋಗಿಕವಾಗಿ ಕೈಕೊಂಡ ವಿಷಯ. ಆದ್ದರಿಂದ ಸ್ವಲ್ಪ ಹೆಚ್ಚಿಗೆ ಖರ್ಚಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಹೂಳು ತೆಗೆಯುವುದರಿಂದ ಹಾಲಿ ಆಚ್ಚುಕಟ್ಟೇನಾದರೂ ಹೆಚ್ಚಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಕೆರೆಗಳ ಕೆಳಗೆ 3—4 ಎಕರೆಗಳಷ್ಟು ಹೆಚ್ಚಿನ ಆಚ್ಚುಕಟ್ಟು ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಈ ಕೆರೆಗಳಿಗೆ ಇನ್ನೂ ಕೋಡಿ ಎತ್ತರಿಸಿ ಏರಿ ಟಾಸ್ತಿ ಮಾಡಿದ್ದರೆ ಇನ್ನೂ ಹೆಚ್ಚು ಜಮೀನು ಆಚ್ಚುಕಟ್ಟಿಗೆ ಬರುತ್ತಿತ್ತಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಯೋಜನೆಯನ್ನು ಬಿಟ್ಟು ಬಿಟ್ಟಿದ್ದೇವೆ. ಅದರಿಂದ ಮೇಲುಗಡೆ ಅನೇಕ ಪ್ರದೇಶ ಮುಳುಗಡೆಯಾಗುತ್ತಿತ್ತೇ ಹೊರತು ಅದಕ್ಕೆ ತಕ್ಕ ಫಲ ಬರುತ್ತಿರಲಿಲ್ಲ.

ಶ್ರೀ ಬಿ ಹುಚ್ಚೇಗೌಡರು.—ನಮ್ಮ ಡಿಸ್ಟ್ರಿಕ್ಟಿನಲ್ಲಿ ಈ ವರ್ಷ ಯಾವ ಯಾವ ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡಿಸ್ಟ್ರಿಕ್ಟ್ ವಾರ್ ಕಾರ್ಯಪಟ್ಟಿ ಇಲ್ಲ. ಆಯಾ ಡಿಸ್ಟ್ರಿಕ್ಟಿನ ಅವಶ್ಯಕತೆಗಳನ್ನು ನೋಡಿಕೊಂಡು ಕೋಲಾರ, ಹಾಸನ ಮುಂತಾದ ಡಿಸ್ಟ್ರಿಕ್ಟ್‌ಗಳಿಗೆ ಬುಲ್ ಡೋಜರುಗಳನ್ನು Taxi-excavators ಗಳನ್ನು ಕಳುಹಿಸಿಕೊಟ್ಟು, ಈ ಸಾರಿ 1951-52ರಲ್ಲಿ ಅಲ್ಲಿನ ಕೆರೆಗಳನ್ನು ಹೂಳು ತೆಗೆಸಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಈ ಟ್ಯಾಕ್ಟ್ ಎಕ್ಸ್‌ಕವೇಟರುಗಳನ್ನೂ ಬುಲ್‌ಡೋಜರುಗಳನ್ನೂ ಉಪಯೋಗಿಸಿ ದೊಡ್ಡ ದೊಡ್ಡ ಕೆರೆಗಳಲ್ಲಿ ಹೂಳು ತೆಗೆಸಲು ಪ್ರಯತ್ನ ಮಾಡುವುದು ಬಹಳ ನಷ್ಟವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು ; ಅದಕ್ಕೋಸ್ಕರವೇ lead ಕಡಿಮೆಯಿರುವ ಕೆರೆಗಳ ಮೇಲೆಯೇ ಇದರ ಕೆಲಸವನ್ನು concentrate ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಅದೇ ರೀತಿ ತಾವು ಸೂಚನೆ ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆಯೇ ಹೇಳಿದ್ದೇವೆ. ಎಲ್ಲಿ lead ಕಡಿಮೆಯಾಗಿರುತ್ತದೆಯೋ ಅಂಥ ನಂದರ್ಭದಲ್ಲಿ ಮಾತ್ರ ಉಪಯೋಗಿಸಬೇಕೆಂದು ಹೇಳಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಈ ಬುಲ್‌ಡೋಜರು ಮುಂತಾದುವುಗಳನ್ನು ಭೂಮಿ ಮಟ್ಟಮಾಡುವುದು ಮುಂತಾದ್ದಕ್ಕೆಂದು ಕೇಳಿದರೆ ಅವರಿಗೆ ಕೊಡುವುದರಿಂದ ಹೆಚ್ಚಿಗೆ ಅನುಕೂಲವಾಗುವುದಿಲ್ಲವೇ ? ಏಕೆಂದರೆ ಈಗ ನಿಮಗೆ ಹೂಳು ತೆಗೆಸುವುದಕ್ಕೆ ಎಕರೆಯೊಂದಕ್ಕೆ 1,000 ರೂಪಾಯಿಗಳವರೆಗೂ ಖರ್ಚಾಗುತ್ತಿದೆ. ಇದಕ್ಕೆ ಬದಲಾಗಿ ಭೂಮಿ ಮಟ್ಟಮಾಡುವುದಕ್ಕೆ ಉಪಯೋಗಿಸುವುದು ಒಳ್ಳೆಯದಲ್ಲವೆ ?

Mr. SPEAKER—That question does not arise.

ಶ್ರೀ ಬಿ. ಹುಚ್ಚೇಗೌಡರು.—ಬುಲ್ ಡೋಜರುಗಳನ್ನು ಉಪಯೋಗಿಸುವ ವಿಷಯ ಕೇಳುತ್ತಿದ್ದೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಕೆರೆಗಳಲ್ಲಿ ಹೂಳು ತೆಗೆಸುವುದಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಬಿ. ಹುಚ್ಚೇಗೌಡರು.—ಈ ಅಧಿವೇಶನ ಮುಗಿಯುವುದರೊಳಗೆ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವ ಕೆರೆಗಳನ್ನು ಈ ವರ್ಷ ಹೂಳು ತೆಗೆಯಿಸಿಕೊಡಬೇಕೆಂಬ ವಿಚಾರವನ್ನು ತರಿಸಿ ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು (ಚಿತ್ರದುರ್ಗ-ಜಿಲ್ಲೆ).—ಇಲ್ಲಿ ಹೇಳಿರುವ ಚೊಕ್ಕಸಂದ್ರದ ಕೆರೆಯ ಅಂಗಳದ ವಿಸ್ತೀರ್ಣ ಎಷ್ಟು ?

The Hon'ble Sri T. MARIAPPA—I am afraid, I have not got the information.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಇದರ ಹೂಳು ತೆಗೆಸುವುದಕ್ಕೆ ಎಷ್ಟು ಖರ್ಚಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾನಾಗಲೇ ಹೇಳಿದಂತೆ ಒಂದು ಘನ ಗಜದಷ್ಟು ಹೂಳು ತೆಗೆಸುವುದಕ್ಕೆ ನುಮಾರು 7 ಆಣೆಗಳವರೆಗೂ ಖರ್ಚಾಗಿದೆಯೆಂದು ಗೊತ್ತಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಿಂಗ ಸಂದ್ರದ ಕೆರೆಗೆ ಎಷ್ಟು ಖರ್ಚಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸ್ವಲ್ಪ ವ್ಯತ್ಯಾಸವಾಗಿದೆ. ಚೊಕ್ಕಸಂದ್ರದ ಕೆರೆ ಮೊದಲು ತೆಗೆದುಕೊಂಡಂಥಾದ್ದು; ಈ ಸಿಂಗ ಸಂದ್ರದ ಕೆರೆಗೆ ಅರಣಿಯಂತೆ ಖರ್ಚಾಗಿದೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಇಷ್ಟು ಹಣ ಖರ್ಚುಮಾಡಿ ಇದನ್ನು ಹೂಳು ತೆಗೆಸಬೇಕಾಗಿತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾದು· ಮೊದಲು ಅದರಲ್ಲಿ ನೀರೇ ನಿಲ್ಲುತ್ತಿರಲಿಲ್ಲ ನೀರಿಲ್ಲದೆ ಆ ರೈತರುಗಳು ಜಮೀನುಗಳನ್ನೆಲ್ಲಾ ಬಾಗಾಯತು ಮಾಡಬೇಕೆಂದಿದ್ದರು. ಅಂಥಾದ್ದರಲ್ಲಿ ಈ ವರ್ಷ ಅಲ್ಲಿ ಬತ್ತದ ಫಸಲು ಕೂಡ ಬೆಳೆದಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದರ ಅಚ್ಚು ಕಟ್ಟೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 35 ಎಕರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಿಂಗಸಂದ್ರ ಕೆರೆಯದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—12 ಎಕರೆ ಇರಬಹುದು.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಗಂಗಸೆಟ್ಟಿ ಕೆರೆಯದು?

The Hon'ble Sri T. MARiAPPA.—I am sorry, I have not got the acreage of atchkats.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಆರು ಕೆರೆಗಳನ್ನು ಹೂಳು ತೆಗೆಸುವುದಕ್ಕೆ ಎಷ್ಟು ದಿವಸವಾಯಿತು ಮತ್ತು ಎಷ್ಟು ಬುಲ್ ಡೋಜರುಗಳನ್ನು ಅದಕ್ಕೆ ಉಪಯೋಗಿಸಲಾಗಿತ್ತು?

The Hon'ble Sri T. MARIAPPA.—I have not got the fuller details. Chokkasandra Tank has taken a long time because that was the first tank. The other tanks have taken 2 months or 3 months. ಸಾಮಾನ್ಯವಾಗಿ ಮೂರು ನಾಲ್ಕು ಬುಲ್‌ಡೋಜರುಗಳು ಒಟ್ಟಿಗೆ ಕೆಲಸ ಮಾಡುತ್ತಿರುತ್ತವೆ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಹೂಳು ತೆಗೆಸುವುದಕ್ಕೆ ಎಷ್ಟು ಘನ ಗಜಗಳಿಗೆ ಎಷ್ಟು ಖರ್ಚಾಗುತ್ತದೆಂದು ಲೆಕ್ಕ ಹಾಕಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರಾಸರಿ 7 ಆಣೆಯಷ್ಟು ಬೀಳಬಹುದೆಂದು ಆಗಲೇ ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಹೂಳು ತೆಗೆದ ಮಣ್ಣನ್ನು ರೈತರು ಯಾರಾದರೂ ಗೊಬ್ಬರಕ್ಕೆ ಕೇಳಿದರೆ ಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೈತರು ತೆಗೆದುಕೊಂಡು ಹೋದರೆ ಬಹಳ ಸಂತೋಷ.

ಶ್ರೀ ಎಸ್. ರಂಗರಾಮಯ್ಯನವರು.—ಈ ವಿಚಾರ ಇನ್ನೂ ರೈತರ ಗಮನಕ್ಕೆ ಬಂದಿಲ್ಲದಿರುವುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಇಲ್ಲಿಯವರೆಗೆ ಅನೇಕರಿಗೆ ಹೇಳಿದ್ದೇವೆ. ಸಧ್ಯ ತೆಗೆದುಕೊಂಡು ಹೋದರೆ ಸಾಕೆಂದಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅನೇಕ ಸಣ್ಣ ಕೆರೆಗಳಿವೆ. ಅವುಗಳನ್ನು ಹೂಳು ತೆಗೆಸಿಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಣ್ಣ ಕೆರೆಗಳ ಹೂಳು ತೆಗೆಸುವುದೇ ಇದರ ಉದ್ದೇಶ. ಡಿಸ್ಟ್ರಿಕ್ಟ್‌ವಾರಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ತಾವೀಗ ಡಿಸ್ಟ್ರಿಕ್ಟ್‌ವಾರಾಗಿಯೇನಾದರೂ ಪಟ್ಟಿ ತಯಾರು ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಡಿಸ್ಟ್ರಿಕ್ಟ್‌ವಾರಾಗಿಯೇ ಪಟ್ಟಿ ತಯಾರು ಮಾಡುತ್ತಿದ್ದಾರೆ. ತುಮಕೂರು, ಹಾಸನ, ಶಿವಮೊಗ್ಗ—ಈ ಕಡೆಯಿಂದ ಮಾಡುತ್ತಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ಡಿಸ್ಟ್ರಿಕ್ಟಿನದೇನಾದರೂ ಮಾಡಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇನ್ನೂ ಆ ಕಾರ್ಯ ಪಟ್ಟಿ ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಸಧ್ಯದಲ್ಲೇ ಅಲ್ಲೇನಾದರೂ ಮಾಡಿಸಲು ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಲೋಚನೆ ಮಾಡುತ್ತೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕ ಮಗಳೂರು ಜಿಲ್ಲೆ).—ಚೊಕ್ಕಸಂದ್ರದ ಕೆರೆಯನ್ನು ಹೂಳು ತೆಗೆಸುವುದಕ್ಕೆ ಮುಂಚೆ ಅಲ್ಲಿ ಎಷ್ಟು ಎಕರೆಯಲ್ಲಿ ಬತ್ತ ಹಾಕಿತ್ತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಬತ್ತ ವನ್ನೇ ಹಾಕುತ್ತಿರಲಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ವರ್ಷ ಎಷ್ಟಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ 30-40 ಎಕರೆಗಳವರೆಗೂ ಆಗಿದೆಯೆಂದು ಗೊತ್ತಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಸಿಂಗ ಸಂದ್ರದ ಕೆರೆಯ ಕೆಳಗೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ 12 ಎಕರೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ 12 ಎಕರೆಗಳಿಗೆ 5,040 ರೂಪಾಯಿಗಳನ್ನು ಖರ್ಚು ಮಾಡಬೇಕೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಚೊಕ್ಕ ಸಂದ್ರದ ಕೆರೆಗೆ ಎಕರೆಯೊಂದಕ್ಕೆ 1000 ರೂಪಾಯಿಗಳವರೆಗೂ ಖರ್ಚಾಗಿದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಅಂದರೆ ಒಂದು ಎಕರೆಯನ್ನು ಸಾಗಿಗೆ ತರುವುದಕ್ಕೆ ಒಂದು ಸಾವಿರ ರೂಪಾಯಿಗಳವರೆಗೂ ಖರ್ಚು ಮಾಡುವುದಕ್ಕೆ ಸರ್ಕಾರದವರು ತಯಾರಾಗಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಾಯೋಗಿಕವಾಗಿ ಈಗ ಮಾಡುತ್ತಿದ್ದೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಟಾಕ್ಸಿ—ಎಕ್ಸ್‌ಕವೇಟರುಗಳು ಬುಲ್‌ಡೋಜರುಗಳನ್ನು ಬೇರೆ ಡಿಸ್ಟ್ರಿಕ್ಟಿನವರೇನಾದರೂ ಕೇಳಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಟಾಕ್ಸಿ-ಎಕ್ಸ್ ಕವೇಟರ್ ಇರುವುದೇ ಒಂದು. ಬುಲ್‌ಡೋಜರುಗಳನ್ನು ಕೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಕೆಲಸಗಳನ್ನು ಮಾಡಿಸುವುದು economical ಆಗಿದೆಯೇ ಇಲ್ಲವೇ ಎಂಬುದನ್ನು ನೋಡಿ ಮಾಡುತ್ತೀರಾ? ಅಥವಾ ಎಷ್ಟೇ ಖರ್ಚಾದರೂ ಮಾಡಿಸಬೇಕೆಂದಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Economical ಆಗಿದ್ದರೆ ಮಾತ್ರ ತೆಗೆದುಕೊಳ್ಳಬೇಕೆಂದಿದ್ದೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಾದರೆ ಎಲ್ಲೆಲ್ಲಿ economical ಆಗಿರುತ್ತದೆಂದು ತಾವು ಪರಿಶೀಲನೆ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

Sri H. C. LINGA REDDY (Kolar District—General).—How long back were the desilting operations begun in the State?

The Hon'ble Sri T. MARIAPPA.—Only a few months back, as the Hon'ble Member is aware.

Sri H. C. LINGA REDDY.—You have mentioned in the answer the names of six tanks that have been desilted. Does it mean that the Government think that the other tanks in other districts do not require desilting?

The Hon'ble Sri T. MARIAPPA.—Sir, it is a question of gaining some experience by experimenting. Naturally we chose tanks in Bangalore, because it was near about and we had workshop facilities here.

Sri H. C. LINGA REDDY.—Can you tell me how many tanks in the State require desilting?

The Hon'ble Sri T. MARIAPPA.—We have not made any survey. But we know that a large number of minor tanks require desilting.

Sri H C. LINGA REDDY.—In regard to cost of desilting, do you make the *atchkatdars* liable?

The Hon'ble Sri T. MARIAPPA.—It is purely borne by the Government of the State and the Government of India.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಕೆರೆಗಳ ಹೂಳು ತೆಗೆಸಲು ಇಷ್ಟಿಷ್ಟು ಖರ್ಚಾಗಿದೆಯೆಂದು ತೋರಿಸಿದ್ದೀರಿ, ಇದರಲ್ಲಿ ಸಿಬ್ಬಂದಿಯ ಖರ್ಚೂ ಸೇರುತ್ತದೆಯೋ ಅಥವ ಬುಲ್‌ಡೋಜರುಗಳ ಖರ್ಚು ಮಾತ್ರವೊ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಲ್ಲಿ ಎಲ್ಲ ಖರ್ಚೂ ಸೇರಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಈ ಖರ್ಚನ್ನು ರೈತರಿಗೆ ಹಾಕಿ ಕಾಂಟ್ರಿಬ್ಯೂಷನ್ ರೂಪದಲ್ಲಿ ತೆಗೆದುಕೊಳ್ಳುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವಕಾಶದ ತೆಗೆದುಕೊಳ್ಳುವುದಿಲ್ಲವೆಂದು ಆಗಲೇ ಹೇಳಿದ್ದೇನೆ.

Sri H. M. CHANNABASAPPA (Mysore District—General).—May I know the capacities of those tanks before they were desilted?

The Hon'ble Sri T. MARIAPPA.—I want notice.

Sri H. M. CHANNABASAPPA.—What are the capacities now at least, after desilting?

The Hon'ble Sri T. MARIAPPA.—Notice.

Sri H. M. CHANNABASAPPA.—My question is what were the capacities before desilting and what are the capacities now after desilting?

The Hon'ble Sri T. MARIAPPA.—I have already asked for notice.

Sri H. M. CHANNABASAPPA.—What is the total establishment charges of each desilting unit?

The Hon'ble Sri T. MARIAPPA.—I want notice.

Sri H. M. CHANNABASAPPA.—The Hon'ble Minister was pleased to state that it works out to seven annas per cubic yard. Can the Government tell me whether this is inclusive of the overhead charges?

The Hon'ble Sri T. MARIAPPA.—That is inclusive of the establishment charges with regard to bulldozer equipment. Sir, the question is very vague. It may include even the Food Production Commissioner's salary.

Sri H. M. CHANNABASAPPA.—Can the Hon'ble Minister tell me what it would have cost to achieve the same increase in capacity by raising the waste-weir of Chokkasandra tank?

The Hon'ble Sri T. MARIAPPA.—Chokkasandra tank is a minor tank and technical opinion was that it cannot be restored because it had been heavily silted to the extent of about 8 feet, and the capacity was reduced to 1 or 1½ units. Therefore they said that it was not practicable to restore this tank.

Sri H. M. CHANNABASAPPA.—Did the Government get an estimate to increase the capacity of the tank by raising the waste weir by the usual method now adopted?

The Hon'ble Sri T. MARIAPPA.—There was no reason to prepare an esti-

mate because technical opinion was not in favour of the restoration of this tank.

Sri H. M. CHANNABASAPPA.—Without an estimate, how did the technical department give a decision that it is not desirable to restore the tank?

Mr. SPEAKER.—Estimates are prepared only in respect of tanks which are considered desirable to restore.

Sri H. M. CHANNABASAPPA. — To arrive at the decision that it is desirable or not to restore them there must be an estimate.

Mr. SPEAKER.—If it is desirable to restore a tank, only then they prepare an estimate.

Sri H. M. CHANNABASAPPA.—How many tanks can this desilting unit desilt per year?

The Hon'ble Sri T. MARIAPPA.—It depends upon various factors: upon the workshop position where we have to repair these bulldozers, the speed with which we can move them from one place to the other and the speed with which these desilting operations can be successfully completed. Therefore we have assigned these units to several districts and after some experience is gained we can say whether the work is speedily completed or otherwise.

Sri H. M. CHANNABASAPPA.—Are the Government aware that the need for desilting by taxi-excavators and bulldozers is more in malnad parts where there is no labour?

The Hon'ble Sri T. MARIAPPA.—It depends on various factors as I already said. In fact I have sent a bulldozer to Shimoga; they have not used it because it does not dry soon. it takes a long time. March and April will be the best working season. That also should be taken into consideration.

Sri H. M. CHANNABASAPPA.—Are the Government aware that within the short period the desilting operations have taken place, the desilting units cannot work there for many months in the year?

The Hon'ble Sri T. MARIAPPA.—Sir, in Maidan parts we know that the rainy season begins late and we do not get water in some tanks even late in August and September. So we can naturally work for a longer period. But in Malnad the working season is naturally less.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಕೆರೆಗಳ ಹೂಳು ತೆಗೆಸಿರುವುದರಿಂದ ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಸಹಾಯವಾಗಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇ ಉದ್ದೇಶದಿಂದಲೇ ಮಾಡಿರುವುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ಜೊಕ್ಕಸಂದ್ರ ಕೆರೆಗೆ 30,200 ರೂಪಾಯಿ ಖರ್ಚು ಮಾಡಿದ್ದೀರಿ, ಇದರಿಂದ ಎಷ್ಟು ಹೆಚ್ಚು ಆಹಾರ ಧಾನ್ಯ ಬಂದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಕೆರೆಯನ್ನು ಹೂಳು ತೆಗೆಸಿದ ಮೇರೆ ಇದರ ಅಚ್ಚುಕಟ್ಟು ಜಮೀನಿಂದ ಎಷ್ಟು ಹೆಚ್ಚು ಆಹಾರಧಾನ್ಯ ಬಂದಿದೆಯೆಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೈಸೂರು ಜಿಲ್ಲೆಯಲ್ಲಿ ಅನೇಕ ಕೆರೆಗಳಿಗೆ ಹೂಳು ತೆಗೆಸದೇಯಿರುವುದರಿಂದ ಹೆಚ್ಚು ಆಹಾರ ಬೆಳೆಯಲು ಕಷ್ಟವಾಗಿದೆಯೆಂದು ಹೇಳಿದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರು ಜಿಲ್ಲೆಯಲ್ಲಿ ಜನ ಸಹಾಯದಿಂದ ಬೇಕಾದಷ್ಟು ಕೆರೆಗಳ ಹೂಳು ತೆಗೆಸಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಸಾರಿ ಒಂದು ಯೋಜನೆಯನ್ನಿಟ್ಟುಕೊಂಡು ಮೂರು ಜಿಲ್ಲೆಗಳ ಕೆರೆಗಳನ್ನು ನೇರಿಸಲಾಗಿದೆ. ಇದರಲ್ಲಿ ಮೈಸೂರು ಜಿಲ್ಲೆಯ ಕೆರೆಗಳನ್ನೂ ಸೇರಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಲೋಚನೆ ಮಾಡುತ್ತೇವೆ.

Supply of Rubble to Tunga and Lakkavalli Projects.

*Q.—217. **Sri L. H. THIMMA BOI** (Chikmagalur District—Depressed Class).—

Will the Government be pleased to state:—

(*a*) whether rubble is being conveyed to the Tunga and Lakkavalli projects;

(*b*) the rate given for conveyance per unit per mile in both the projects;

(*c*) at what different leads the material is available in both the projects (in detail)?

A.—**The Honb'le Sri T. MARIAPPA** (Home Minister).—

(*a*) Yes.